**ಸಿ.ಸಿ. ಸಂಖ್ಯೆ 3850/2023**
**ಪಿ.ಡಬ್ಲ್ಯೂ-01**

**ದಿನಾಂಕಃ26-05-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು- ಆರೋಪಿಯ ಪರ ಶ್ರೀ.ಹೆಚ್.ಎನ್ ವಕೀಲರಿಂದ -**

18. ಆರೋಪಿಯು ನನಗೆ ರೂ. 18 ಸಾವಿರ ಹಣವನ್ನು ಬಡ್ಡಿಯಾಗಿ ನೀಡಿದ್ದರು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಸದರಿ ದಾಖಲೆಯು ಯಾವುದು ಎಂದರೆ ಸಾಕ್ಷಿಯು ಆರೋಪಿಯು ಯಾವುದೇ ದಾಖಲೆಯನ್ನು ನೀಡಿರುವುದಿಲ್ಲ ಮತ್ತು ಕೇವಲ ಹಣವನ್ನು ಮಾತ್ರ ನೀಡಿರುತ್ತಾರೆ ಎನ್ನುತ್ತಾರೆ. ಆರೋಪಿಯು ಎಂದಿಗೂ ನಿಮಗೆ ಬಡ್ಡಿ ಹಣವನ್ನು ನೀಡಿರುವುದಿಲ್ಲ ಮತ್ತು ನಿಮ್ಮ ಮತ್ತು ಅವರ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. 2021 ನೇ ಇಸವಿಯ ಡಿಸೆಂಬರ್ ತಿಂಗಳಿನಿಂದ ಆರೋಪಿಯು ಬಡ್ಡಿಯನ್ನು ಪಾವತಿ ಮಾಡಿರುವುದಿಲ್ಲ ಮತ್ತು ಅದಕ್ಕೆ ಸಂಬಂಧಿಸಿದಂತೆ ನಾವು ಯಾವುದೇ ಕರಾರುಪತ್ರವನ್ನು ಮಾಡಿಕೊಂಡಿರುವುದಿಲ್ಲ. ನೀವು 2022 ನೇ ಇಸವಿಯ ಎಪ್ರಿಲ್ ತಿಂಗಳಿನಲ್ಲಿ ಆರೋಪಿಯ ಬಳಿ ಬಡ್ಡಿಯನ್ನು ಕೇಳಲು ಹೋದಾಗ ಅವರು ತನಗೆ ಸಾಕಷ್ಟು ಸಮಸ್ಯೆ ಇದೆ ಎಂದು ಹೇಳಿದ್ದರು ಎಂದು ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿರುತ್ತೀರಾ ಮತ್ತು ಅವರಿಗೆ ಯಾವ ಸಮಸ್ಯೆ ಇತ್ತು ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ತಾನು 2022 ನೇ ಇಸವಿಯ ಏಪ್ರೀಲ್ ತಿಂಗಳಿನಲ್ಲಿ ಆರೋಪಿಯ ಬಳಿ ಬಡ್ಡಿಯನ್ನು ಕೇಳಿರುವುದಿಲ್ಲ ಎನ್ನುತ್ತಾರೆ.

19. ಆರೋಪಿಯು ಯಾವ ಬಿಸಿನೆಸ್ ನ್ನು ಮಾಡುತ್ತಾರೆ ಎಂದು ನಾನು ಕಣ್ಣಾರೆ ನೋಡಿರುವುದಿಲ್ಲ. ಆರೋಪಿಯು ತಾನು ವ್ಯವಹಾರವನ್ನು ಮಾಡುತ್ತೇನೆ ಎಂದು ಹೇಳಿದ ಮೇರೆಗೆ ನೀವು ಅವರಿಗೆ ಹಣವನ್ನು

ನೀಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ಅರೋಪಿಯು ಸಾಲವನ್ನು ಮಾಡಿದ್ದೇನೆ ಎಂದು ಹೇಳಿದ ಕಾರಣ ಹಣವನ್ನು ನೀಡಿದ್ದೇನೆ ಎಂದು ನುಡಿದಿರುತ್ತಾರೆ. 2021 ನೇ ಇಸವಿಯ ಡಿಸೆಂಬರ್ ತಿಂಗಳಿನಿಂದ ಪ್ರಸ್ತುತ ಪ್ರಕರಣವನ್ನು ಸಲ್ಲಿಸುವ ತನಕ ಆರೋಪಿಯು ಆರೋಪಿಯು ನಿಮಗೆ ಆಪಾದಿತ ಹಣ, ಬಡ್ಡಿ ಹಣ ಮತ್ತು ಮೋಸವನ್ನು ಮಾಡಿದ್ದಾರೆ ಎಂದು ಹೇಳಿ ನೀವು ಯಾವುದಾದರೂ ಕಾನೂನು ಕ್ರಮವನ್ನು ಜರುಗಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ನಾನು ನನ್ನ ಮಕ್ಕಳಾದ ದಿಲೀಪ್, ಕಿರಣ್ ಮತ್ತು ತಂಗಿ ಮಗಳಾದ ಸವಿತ ಮತ್ತು ಪುನೀತ್ ರವರನ್ನು ಕರೆದುಕೊಂಡು ಹೋಗಿ ಆರೋಪಿಯ ಬಳಿ ಎಂದಿಗೂ ಹಣವನ್ನು ಕೇಳಿರುವುದಿಲ್ಲ. ಪುನೀತ್ ರವರನ್ನು ಕರೆದುಕೊಂಡು ಹೋಗಿ ಆರೋಪಿಯ ಬಳಿ ನಿಮ್ಮ ಹಣವನ್ನು ಕೇಳಲು ನಿಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ.

20. ನಿಪಿ-1 ರಲ್ಲಿ ಇರುವ ವಿಷಯವು ಆಂಗ್ಲ ಬಾಷೆಯಿಂದ ಕೂಡಿರುತ್ತದೆ. ನನಗೆ ಆಂಗ್ಲ ಭಾಷೆಯನ್ನು ಓದಲು ಮತ್ತು ಬರೆಯಲು ಬರುವುದಿಲ್ಲ. ನೀವು ಯಾರ ಜೊತೆ ಚರ್ಚೆಯನ್ನು ಮಾಡಿ ನಿಪಿ-1 ನ್ನು ನಿಮ್ಮ ಬ್ಯಾಂಕ್ ಖಾತೆಗೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ನಿಪಿ-1 ರಲ್ಲಿ ಇರುವ ವಿಷಯವನ್ನು ಆರೋಪಿಯೇ ಬರೆದಿರುತ್ತಾರೆ ಎನ್ನುತ್ತಾರೆ. ಅರೋಪಿಯು ನಿಮಗೆ ನಿಪಿ-1 ನ್ನು ನೀಡಿದ ದಿನದಿಂದ ನೀವು ನಿಪಿ-1 ನ್ನು ಬ್ಯಾಂಕ್ ಖಾತೆಗೆ ಹಾಜರುಪಡಿಸಲು ಸಾಕಷ್ಟು ದಿನಗಳ ಅಂತರವಿದೆ ಎಂದರೆ ಸಾಕ್ಷಿಯು ಆರೋಪಿಯು ನಿಪಿ-1 ನ್ನು ನೀಡಿದ ದಿನದಂದೆ ತಾನು ನಿಪಿ-1 ನ್ನು ತನ್ನ ಬ್ಯಾಂಕ್ ಖಾತೆಗೆ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಆರೋಪಿಯು ಬೆಳಗ್ಗೆ 9 ಗಂಟೆ ಸಮಯದಲ್ಲಿ ಅವರ ಮನೆಯಲ್ಲಿಯೇ ನಿಪಿ-1 ನ್ನು ನನಗೆ ನೀಡಿರುತ್ತಾರೆ. ಆರೋಪಿಯ ಮನೆ ಎಲ್ಲಿ ಇದೆ ಎಂದರೆ ಸಾಕ್ಷಿಯು ನಾಗರಬಾವಿಯ 2 ನೇ

ಹಂತದಲ್ಲಿ ಇರುವ ಮಾಳಗಾಲ್‌ನ, ಕೃಷ್ಣನಂದಾನಗರದ ಹನುಮಂತೇಗೌಡ ನಿಲಯ ಆಗಿದೆ ಎನ್ನುತ್ತಾರೆ. ಸದರಿ ವಿಳಾಸದಲ್ಲಿ ಆರೋಪಿಯು ಎಂದಿಗೂ ಸಹ ವಾಸಿಸುತ್ತಿರಲಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯ 9 ನೇ ಪ್ಯಾರಾದಲ್ಲಿ ಆರೋಪಿಯು ತನಗೆ ಬರಬೇಕಾದ ಬಿಲ್ ನ ಮೊತ್ತಕ್ಕೆ ಅನುಗುಣವಾಗಿ ನಿಪಿ-1 ನ್ನು ನಿಮಗೆ ನೀಡಿದ್ದಾರೆ ಎಂದು ನಮೂದಿಸಲಾಗಿದೆ ಮತ್ತು ಸದರಿ ಬಿಲ್ ಯಾವುದು ಎಂದು ನೀವು ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**